ದಿನಾಂಕ 28-01-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಎಂ ವಕೀಲರಿಂದ,

ನಾನು ಈ ದಾವೆಯ ದಾಖಲೆಗಳನ್ನು ನಾನೇ ಅರ್ಜಿ ಸಲ್ಲಿಸಿ ಪಡೆದುಕೊಂಡಿದ್ದೇನೆ ಎಂದರೆ ಸರಿ. ನನ್ನ ಮಾವ 1991 ರಲ್ಲಿ ಮೃತಪಟ್ಟರು, ಅವರ ತಮ್ಮನ ಹೆಸರು ಮುದ್ದಪ್ಪ. ಅವರ ತಮ್ಮ ಮುದ್ದಪ್ಪ 1994 ರಲ್ಲಿ ಮೃತಪಟ್ಟಿರುತ್ತಾರೆ. ಅವರ ಆರಾಧನಾ ಪತ್ರಿಕೆಯನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅದನ್ನು ವಕೀಲರ ಕೋರಿಕೆಯ ಮೇರೆಗೆ ನಿಡಿ 1 ಎಂದು ಗುರುತಿಸಲಾಯಿತು. ದಾವಾ ಸ್ವತ್ತು ಈಗ ಭಾಗ್ಯಮ್ಮ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಅದು ಭಾಗ್ಯಮ್ಮನವರ ಸ್ವಾಧೀನದಲ್ಲೇ ಇದೆ ಎಂದರೆ ಸಾಕ್ಷಿ ಅದು ಐದು ಜನ ಹೆಣ್ಣು ಮಕ್ಕಳ ಸ್ವಾಧೀನದಲ್ಲಿ ಇದೆ ಎಂದು ನುಡಿಯುತ್ತಾರೆ. ನನ್ನ ಅತ್ತೆ ಮಾವನವರ ಜೀವಿತಾ ಕಾಲದಲ್ಲಿ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಟ್ಟಿದ್ದಾರೆ, ಅದರಂತೆ ಪ್ರತ್ಯೇಕವಾಗಿ ಎಲ್ಲರೂ ಖಾತೆ ಮತ್ತು ಸ್ವಾಧೀನ ಹೊಂದಿದ್ದಾರೆ ಎಂದರೆ ಸಾಕ್ಷಿ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು 2 ನೇ ಪ್ರತಿವಾದಿಯ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗೆ ಯಾವುದೇ ರೀತಿಯಾದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.